**ಕರ್ನಾಟಕ ಸರ್ಕಾರ**
**ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ**

**ಜಿಲ್ಲಾಡಳಿತ ಭವನ, ಶಿಡ್ಲಘಟ್ಟ ರಸ್ತೆ** **ದೂರವಾಣಿ: 08156-277016**
**ಇ-ಮೇಲ್: zpadmckbpur@gmail.com** **ಫ್ಯಾಕ್ಸ್: 08156-277011**

**ಸಂಖ್ಯೆ: CKBZP-11031/20/2024-CKBZP-CHIKKABALLAPURA (ಇ- 47728)** **ದಿನಾಂಕ:06.07.2024**

**ರವರಿಗೆ:**

**ಕಾರ್ಯನಿರ್ವಾಹಕ ಅಧಿಕಾರಿ**
**ತಾಲ್ಲೂಕು ಪಂಚಾಯಿತಿ**
**ಚಿಕ್ಕಬಳ್ಳಾಪುರ/ಚಿಂತಾಮಣಿ/ ಬಾಗೇಪಲ್ಲಿ/ಚೇಳೂರು**
**ಗೌರಿಬಿದನೂರು/ಮಂಚೇನಹಳ್ಳಿ/ಶಿಡ್ಲಘಟ್ಟ/ಗುಡಿಬಂಡೆ.**

**ಮಾನ್ಯರೇ,**

**ವಿಷಯ:** ಗಣಿತ ಕಲಿಕಾ ಆಂದೋಲನವನ್ನು ಸರ್ಕಾರಿ ಶಾಲೆಗಳಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಬಗ್ಗೆ.

**ಉಲ್ಲೇಖ:** ಜಿಲ್ಲಾ ಸಂಯೋಜಕರು, ಅಕ್ಷರ ಫೌಂಡೇಶನ್, ಚಿಕ್ಕಬಳ್ಳಾಪುರ ರವರ ಪತ್ರದ ದಿನಾಂಕ: 02.07.2024.

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಸರ್ಕಾರ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಸಾರ್ವಜನಿಕ ಶಿಕ್ಷಣ ಇಲಾಖೆ ಹಾಗೂ ಅಕ್ಷರ ಫೌಂಡೇಶನ್ ಬೆಂಗಳೂರು ಇವರ ಸಹಯೋಗದೊಂದಿಗೆ ಅಕ್ಷರ ಫೌಂಡೇಶನ್ ಸಂಸ್ಥೆಯು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಹಾಗೂ ಸಮುದಾಯವನ್ನು ವಿಶ್ವಾಸಕ್ಕೆ ತೆಗೆದುಕೊಂಡು ಇಲ್ಲಿಯವರೆಗೆ ಕೋವಿಡ್ ಜಾಗೃತಿ, ಪರ್ಯಾಯ ಗಣಿತ ಕಲಿಕಾ ಕಾರ್ಯಕ್ರಮ, ಮನೆಯಲ್ಲಿ ಮಾಡೋಣ ಲೆಕ್ಕ, ಬಿಲ್ಡಿಂಗ್ ಬ್ಲಾಕ್ ಅಕ್ಷರ ಆಪ್, ಶಿಕ್ಷಕರ ಸಾಮರ್ಥ್ಯವನ್ನು ಹೆಚ್ಚಿಸಲು Teaching Training Videos, ಶಿಕ್ಷಕರ ಶ್ರಮವನ್ನು ಗೌರವಿಸಲು ಪ್ರತಿಬಿಂಬ (Podcast), ಪ್ರತಿ ವರ್ಷದಂತೆ ಗ್ರಾಮ ಪಂಚಾಯಿತಿ ಮಟ್ಟದ ಪ್ರಾಥಮಿಕ ಶಾಲಾ ಮಕ್ಕಳಿಗಾಗಿ "ಗಣಿತ ಸ್ಪರ್ಧೆಗಳ" ಆಯೋಜನೆ ಮತ್ತು 1-3-6-9 ಗೋಡೆ ಬರಹಗಳನ್ನು ಬರೆಯಿಸುವುದರ ಮೂಲಕ ಜೊತೆಗೂಡಿ ಕೆಲಸ ಮಾಡುತ್ತಿದೆ.

2024-25 ನೇ ಶೈಕ್ಷಣಿಕ ಸಾಲಿನಲ್ಲಿ ಗಣಿತ ಕಲಿಕಾ ಆಂದೋಲನದ ಎಲ್ಲಾ ಕಾರ್ಯಕ್ರಮಗಳು ಜಿಲ್ಲೆಯ ಎಲ್ಲಾ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಸರ್ಕಾರಿ ಶಾಲೆಗಳಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನವಾಗುವಂತೆ ಆದೇಶಿಸಲು ಉಲ್ಲೇಖಿತ ಪತ್ರದಲ್ಲಿ ಕೋರಿರುತ್ತಾರೆ.

ಅದರಂತೆ, ಉಲ್ಲೇಖಿತ ಮನವಿಯಲ್ಲಿ ಕೋರಿರುವ ಈ ಕೆಳಕಂಡ ಅಂಶಗಳ ಬಗ್ಗೆ ನಿಯಮಾನುಸಾರ ಪರಿಶೀಲಿಸಿ ಅಗತ್ಯ ಕ್ರಮ ವಹಿಸಲು ಸೂಚಿಸಿದೆ.

1. ಜಿಲ್ಲೆಯ ಎಲ್ಲಾ ಸರ್ಕಾರಿ ಶಾಲೆಗಳಲ್ಲಿ 4 ಮತ್ತು 5ನೇ ತರಗತಿಯ ಮಕ್ಕಳಿಗೆ ಸರಳವಾಗಿ ಹಾಗೂ ಪರಿಣಾಮಕಾರಿಯಾಗಿ ಕಲಿಯಲು ಗಣಿತ ಕಿಟ್ ನಲ್ಲಿರುವ ಒಟ್ಟು 22 ಕಲಿಕೋಪಕರಣಗಳನ್ನು ಗಣಿತ ಭೋದಿಸುವಂತಹ ಶಿಕ್ಷಕರು ಪಾಠಯೋಜನೆಯಂತೆ ಪ್ರತಿ ದಿನ ಸಿ.ಆರ್.ಎ (C-R-A) ವಿಧಾನದಲ್ಲಿ ಮಕ್ಕಳಿಗೆ ಬೋಧಿಸುವಂತೆ ಆದೇಶಿಸುವುದು ಹಾಗೂ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ತಮ್ಮ ಶಾಲಾ ಭೇಟಿಯ ಸಂದರ್ಭದಲ್ಲಿ ಗಣಿತ ಕಿಟ್ ಬಳಕೆಯ ಮತ್ತು ಮಕ್ಕಳ ಕಲಿಕೆಯ ವೀಕ್ಷಣೆಯ ಕುರಿತು ವರದಿ ಸಲ್ಲಿಸುವುದು.
2. ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ತಮ್ಮ ಗ್ರಾಮ ಪಂಚಾಯತಿ ಕೇಂದ್ರ ಗ್ರಾಮದಿಂದ ಇಬ್ಬರು ಶೈಕ್ಷಣಿಕ ತಂಡದ ನಾಯಕರನ್ನು (ಆಯ್ಕೆ ಆಗಿರದ) CRP ರವರ ಸಹಕಾರದೊಂದಿಗೆ ಗುರುತಿಸಿ, ಸದರಿ ನಮೂನೆಯಲ್ಲಿ ತುಂಬಿ ತಾಲ್ಲೂಕು ಪಂಚಾಯತಿ ಕಚೇರಿಗೆ ಸಲ್ಲಿಸುವುದು.
3. ಮಕ್ಕಳ ಗುಣಾತ್ಮಕ ಕಲಿಕೆಗಾಗಿ ಎಲ್ಲಾ ಶಾಲೆಗಳ ಮುಂಭಾಗದಲ್ಲಿ ಹಾಗೂ ಗ್ರಾಮ ಪಂಚಾಯತಿ ಕಚೇರಿಯ ಮುಂಭಾಗದಲ್ಲಿ 1-3-6-9 ಗೋಡೆ ಬರಹಗಳನ್ನು ಬರವಣಿಗೆ ಮಾಡಿಸಿ, ಅನುಷ್ಠಾನ ಮಾಡಲು ಕೋರಲಾಗಿದೆ.

<<2

4. ಗ್ರಾಮ ಪಂಚಾಯತಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಸಮುದಾಯ, ಗ್ರಾಮ ಪಂಚಾಯತ ಮಟ್ಟದ ತಂಡದ ನಾಯಕರು, ಶೈಕ್ಷಣಿಕ ಸ್ವಯಂ ಸೇವಕರ ಬೆಂಬಲದೊಂದಿಗೆ ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಈ ಶೈಕ್ಷಣಿಕ ವರ್ಷದ ಸೆಪ್ಟೆಂಬರ್ ತಿಂಗಳಿನ ಒಂದು ದಿನದಲ್ಲಿ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಗ್ರಾಮ ಪಂಚಾಯತಿ ನಿರ್ಧರಿಸಿದ ಸ್ಥಳ ಮತ್ತು ದಿನಾಂಕದಂದು ಮುಖ್ಯ ಶಿಕ್ಷಕರು, ಗಣಿತ ಬೋಧಿಸುವ ಶಿಕ್ಷಕರು 4, 5 ಮತ್ತು 6ನೇ ತರಗತಿಯ ಸರಕಾರಿ ಶಾಲೆಯ ಎಲ್ಲಾ ಮಕ್ಕಳು 100% ಹಾಜರಾತಿಯೊಂದಿಗೆ "ಗ್ರಾಮ ಪಂಚಾಯತಿ ಮಟ್ಟದ ಶಾಲಾ ಮಕ್ಕಳ ಗಣಿತ ಸ್ಪರ್ಧೆಗೆ" ಪಾಲ್ಗೊಳ್ಳುವುದು. ಸ್ಪರ್ಧೆಯಲ್ಲಿ ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನದಲ್ಲಿ ವಿಜೇತರಾದ 9 ಮಕ್ಕಳಿಗೆ ಬಹುಮಾನವನ್ನು ನೀಡಿ ಪ್ರೋತ್ಸಾಹದಾಯಕವಾದ ಗಣಿತ ಸ್ಪರ್ಧೆಗಳನ್ನು ನಡೆಸುವಂತೆ ತಾಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಮತ್ತು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ (PDO) ಸೂಚಿಸಿದೆ.

5. ಗ್ರಾಮ ಪಂಚಾಯಿತಿಗೆ ಒಳಪಡುವ ಪ್ರತಿ ಗ್ರಾಮದ ಎಲ್ಲಾ ಮಕ್ಕಳು ಕಡ್ಡಾಯವಾಗಿ ಗಣಿತ ಸ್ಪರ್ಧೆಯಲ್ಲಿ ಭಾಗವಹಿಸುವಂತೆ ಎಸ್.ಡಿ.ಎಮ್.ಸಿ (SDMC) ಸದಸ್ಯರು, ಗ್ರಾಮ ಪಂಚಾಯತ್ ಸದಸ್ಯರು, ಮುಖ್ಯ ಶಿಕ್ಷಕರು ಹಾಗೂ ಶೈಕ್ಷಣಿಕ ಸ್ವಯಂ ಸೇವಕರ ಜವಬ್ದಾರಿಗಳ ಬಗ್ಗೆ ಗ್ರಾಮ ಪಂಚಾಯಿತಿ ಅಧ್ಯಕ್ಷರು/PDO ರವರು ತಿಳಿಸಲು ಸೂಚಿಸಿದೆ.

**ತಮ್ಮ ವಿಶ್ವಾಸಿ**

**ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ**
**ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ.**

**ಪ್ರತಿಯನ್ನು:**

1. ಉಪನಿರ್ದೇಶಕರು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಚಿಕ್ಕಬಳ್ಳಾಪುರ ರವರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.
2. ಜಿಲ್ಲೆಯ ಎಲ್ಲಾ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಕಾರ್ಯನಿರ್ವಾಹಕ ಅಧಿಕಾರಿಗಳ ಮುಖಾಂತರ.
3. ಜಿಲ್ಲಾ ಸಂಯೋಜಕರು, ಅಕ್ಷರ ಫೌಂಡೇಶನ್, ಚಿಕ್ಕಬಳ್ಳಾಪುರ ರವರ ಮಾಹಿತಿಗಾಗಿ.
4. ಕಛೇರಿ ಪ್ರತಿ.

Akshara Foundation
EVERY CHILD IN SCHOOL AND LEARNING WELL

No. 621,5th Main, OMBR Layout
Banasawadi, Bangalore 560043 India
Tel +91 80 25429726/27
Fax +91 80 25429728
Email: info@akshara.org.in
aksharafoundation@gmail.com

ಇವರಿಗೆ,

ದಿನಾಂಕ: 02/07/2024

ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ್ ಕಾರ್ಯಾಲಯ
ಚಿಕ್ಕಬಳ್ಳಾಪುರ ಜಿಲ್ಲೆ.

ಮಾನ್ಯರೇ,

ವಿಷಯ: ಗಣಿತ ಕಲಿಕಾ ಆಂದೋಲನವು ಶಾಲೆಗಳಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನವಾಗಲು ಗ್ರಾಮ ಪಂಚಾಯತಿ ಹಾಗೂ ಸಮುದಾಯವನ್ನು ಶಿಕ್ಷಣದಲ್ಲಿ ತೊಡಗಿಸಿಕೊಳ್ಳುವಂತೆ ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ಆದೇಶ ನೀಡುವ ಕುರಿತು

*******

ಕರ್ನಾಟಕ ಸರ್ಕಾರ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತರಾಜ್ ಇಲಾಖೆ, ಸಾರ್ವಜನಿಕ ಶಿಕ್ಷಣ ಇಲಾಖೆ ಹಾಗೂ ಅಕ್ಷರ ಫೌಂಡೇಶನ್ ಬೆಂಗಳೂರು ಇವರ ಸಹಯೋಗದೊಂದಿಗೆ ಮಕ್ಕಳ ಗುಣಾತ್ಮಕ ಶಿಕ್ಷಣಕ್ಕಾಗಿ ಸರಕಾರದ ಗಣಿತ ಕಲಿಕಾ ಆಂದೋಲನವು 2014 ರಿಂದ 2023-24 ರವರೆಗೆ ನಿರಂತರವಾಗಿ ತೊಡಗಿಸಿಕೊಂಡು ಹಂತ-1, ಹಂತ-2 ಮತ್ತು ಹಂತ-3 ರಲ್ಲಿ ಕೆಲಸ ಮಾಡುತ್ತಿರುವುದು ತಮಗೆ ತಿಳಿದ ವಿಷಯವಾಗಿದೆ.

ಅಕ್ಷರ ಫೌಂಡೇಶನ್ ಸಂಸ್ಥೆಯು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತರಾಜ್ ಇಲಾಖೆ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಹಾಗೂ ಸಮುದಾಯವನ್ನು ವಿಶ್ವಾಸಕ್ಕೆ ತೆಗೆದುಕೊಂಡು ಇಲ್ಲಿಯವರೆಗೆ ಕೋವಿಡ್ ಜಾಗೃತಿ, ಪರ್ಯಾಯ ಗಣಿತ ಕಲಿಕಾ ಕಾರ್ಯಕ್ರಮ, ಮನೆಯಲ್ಲಿ ಮಾಡೋಣ ಲೆಕ್ಕ, ಬಿಲ್ಡಿಂಗ್‌ಬ್ಲಾಕ್ ಅಕ್ಷರ ಆಪ್, ಶಿಕ್ಷಕರ ಸಾಮರ್ಥ್ಯವನ್ನು ಹೆಚ್ಚಿಸಲು Teaching Training Videos, ಶಿಕ್ಷಕರ ಶ್ರಮವನ್ನು ಗೌರವಿಸಲು ಪ್ರತಿಬಿಂಬ (Podcast), ಪ್ರತೀ ವರ್ಷದಂತೆ **ಗ್ರಾಮ ಪಂಚಾಯತಿ ಮಟ್ಟದ ಪ್ರಾಥಮಿಕ ಶಾಲಾ ಮಕ್ಕಳಿಗಾಗಿ 'ಗಣಿತ ಸ್ಪರ್ಧೆಗಳ'** ಆಯೋಜನೆ ಮತ್ತು 1-3-6-9 ಗೋಡೆ ಬರಹಗಳನ್ನು ಬರೆಯಿಸುವುದರ ಮೂಲಕ ಜೊತೆಗೂಡಿ ಕೆಲಸ ಮಾಡುತ್ತಿದೆ.

Akshara Foundation
EVERY CHILD IN SCHOOL AND LEARNING WELL

No. 621,5th Main, OMBR Layout
Banasawadi, Bangalore 560043 India
Tel +91 80 25429726/27
Fax +91 80 25429728
Email: info@akshara.org.in
aksharafoundation@gmail.com

2024-25ನೇ ಶೈಕ್ಷಣಿಕ ಸಾಲಿನಲ್ಲಿ ಗಣಿತ ಕಲಿಕಾ ಆಂದೋಲನದ ಈ ಕೆಳಗಿನ ಎಲ್ಲಾ ಕಾರ್ಯಕ್ರಮಗಳು ಜಿಲ್ಲೆಯ ಎಲ್ಲಾ ತಾಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಪರಿಣಾಮಕಾರಿಯಾಗಿ ಅನುಷ್ಠಾನವಾಗುವಂತೆ ಆದೇಶಿಸಲು ಕೋರಿಕೊಳ್ಳುತ್ತೇವೆ.

1. ಜಿಲ್ಲೆಯ ಎಲ್ಲಾ ಸರಕಾರಿ ಪ್ರಾಥಮಿಕ ಶಾಲೆಗಳಲ್ಲಿ 4 ಮತ್ತು 5ನೇ ತರಗತಿಯ ಮಕ್ಕಳಿಗೆ ಸರಳವಾಗಿ ಹಾಗೂ ಪರಿಣಾಮಕಾರಿಯಾಗಿ ಕಲಿಯಲು ಗಣಿತ ಕಿಟ್ ನಲ್ಲಿರುವ ಒಟ್ಟು 22 ಕಲಿಕೋಪಕರಣಗಳನ್ನು ಗಣಿತ ಬೋಧಿಸುವಂತಹ ಶಿಕ್ಷಕರು ಪಾಠಯೋಜನೆಯಂತೆ ಪ್ರತಿದಿನ C-R-A ವಿಧಾನದಲ್ಲಿ ಮಕ್ಕಳಿಗೆ ಬೋಧಿಸುವಂತೆ ಆದೇಶಿಸುವುದು ಹಾಗೂ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ತಮ್ಮ ಶಾಲಾ ಭೇಟಿಯ ಸಂದರ್ಭದಲ್ಲಿ ಗಣಿತ ಕಿಟ್ ಬಳಕೆಯ ಮತ್ತು ಮಕ್ಕಳ ಕಲಿಕೆಯ ವೀಕ್ಷಣೆಯ ಕುರಿತು ವರದಿ ಸಲ್ಲಿಸುವಂತೆ ಆದೇಶಿಸುವುದು.
2. ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ರವರು ತಮ್ಮ ಗ್ರಾಮ ಪಂಚಾಯತಿ ಕೇಂದ್ರ ಗ್ರಾಮದಿಂದ ಇಬ್ಬರು ಶೈಕ್ಷಣಿಕ ತಂಡದ ನಾಯಕರನ್ನು (ಆಯ್ಕೆ ಆಗಿರದ) CRP ಯವರ ಸಹಕಾರದೊಂದಿಗೆ ಗುರುತಿಸಿ, ಸದರಿ ನಮೂನೆಯಲ್ಲಿ ತುಂಬಿ ತಾಲೂಕು ಪಂಚಾಯತಿ ಕಚೇರಿಗೆ ಸಲ್ಲಿಸುವುದು.
3. ಮಕ್ಕಳ ಗುಣಾತ್ಮಕ ಕಲಿಕೆಗಾಗಿ ಎಲ್ಲಾ ಶಾಲೆಗಳ ಮುಂಭಾಗದಲ್ಲಿ ಹಾಗೂ ಗ್ರಾಮ ಪಂಚಾಯತಿ ಕಚೇರಿಯ ಮುಂಭಾಗದಲ್ಲಿ 1-3-6-9 ಗೋಡೆ ಬರಹಗಳನ್ನು ಬರವಣಿಗೆ ಮಾಡಿಸಿ, ಅನುಷ್ಠಾನ ಮಾಡಲು ಕೋರಲಾಗಿದೆ.
4. ಗ್ರಾಮ ಪಂಚಾಯತಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಸಮುದಾಯ, ಗ್ರಾಮ ಪಂಚಾಯತ ಮಟ್ಟದ ತಂಡದ ನಾಯಕರು, ಶೈಕ್ಷಣಿಕ ಸ್ವಯಂ ಸೇವಕರ ಬೆಂಬಲದೊಂದಿಗೆ ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಈ ಶೈಕ್ಷಣಿಕ ವರ್ಷದ ಸೆಪ್ಟೆಂಬರ್ ತಿಂಗಳಿನಲ್ಲಿ ಒಂದೇ ದಿನದಲ್ಲಿ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಗ್ರಾಮ ಪಂಚಾಯತಿ ನಿರ್ಧರಿಸಿದ ಸ್ಥಳ ಮತ್ತು ದಿನಾಂಕದಂದು (ಗ್ರಾಮ ಪಂಚಾಯಿತಿ ಅಧ್ಯಕ್ಷರು/PDO ರವರ ಪತ್ರದಂತೆ) ಮುಖ್ಯ ಶಿಕ್ಷಕರು, ಗಣಿತ ಬೋಧಿಸುವ ಶಿಕ್ಷಕರು 4, 5 ಮತ್ತು 6ನೇ ತರಗತಿಯ ಸರಕಾರಿ ಶಾಲೆಯ ಎಲ್ಲಾ ಮಕ್ಕಳು 100% ಹಾಜರಾತಿಯೊಂದಿಗೆ "**ಗ್ರಾಮ ಪಂಚಾಯತಿ ಮಟ್ಟದ ಶಾಲಾ ಮಕ್ಕಳ ಗಣಿತ ಸ್ಪರ್ಧೆಗೆ**" ಪಾಲ್ಗೊಳ್ಳುವುದು.ಶಾಮಿಯಾನ,ಬ್ಯಾನರ್ ಹಾಗೂ ಸ್ಪರ್ಧೆಯಲ್ಲಿ ಪ್ರಥಮ,ದ್ವಿತೀಯ ಮತ್ತು ತೃತೀಯ ಸ್ಥಾನದಲ್ಲಿ ವಿಜೇತರಾದ 9 ಮಕ್ಕಳಿಗೆ ಬಹುಮಾನವನ್ನು ನೀಡಿ ಪ್ರೋತ್ಸಾಹದಾಯಕವಾದ ಗಣಿತ ಸ್ಪರ್ಧೆಗಳನ್ನು ನಡೆಸುವಂತೆ ತಾಲೂಕು ಪಂಚಾಯತ್ ಮತ್ತು

Akshara Foundation
EVERY CHILD IN SCHOOL AND LEARNING WELL

No. 621,5th Main, OMBR Layout
Banasawadi, Bangalore 560043 India
Tel +91 80 25429726/27
Fax +91 80 25429728
Email: info@akshara.org.in
aksharafoundation@gmail.com

ಕಾರ್ಯನಿರ್ವಾಹಕ ಅಧಿಕಾರಿಗಳಿಗೆ (EO) ಮತ್ತು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ (PDO) ಆದೇಶಿಸುವಂತೆ ಕೋರಲಾಗಿದೆ.

5. ಗ್ರಾಮ ಪಂಚಾಯಿತಿಕೆ ಒಳಪಡುವ ಪ್ರತಿ ಗ್ರಾಮದ ಎಲ್ಲಾ ಮಕ್ಕಳು ಕಡ್ಡಾಯವಾಗಿ ಗಣಿತ ಸ್ಪರ್ಧೆಯಲ್ಲಿ ಭಾಗವಹಿಸುವಂತೆ ಎಸ್.ಡಿ.ಎಮ್.ಸಿ ಸದಸ್ಯರು, ಗ್ರಾಮ ಪಂಚಾಯತ್ ಸದಸ್ಯರು, ಮುಖ್ಯ ಶಿಕ್ಷಕರು ಹಾಗೂ ಶೈಕ್ಷಣಿಕ ಸ್ವಯಂಸೇವಕರ ಜವಬ್ದಾರಿಗಳ ಬಗ್ಗೆ ಗ್ರಾಮ ಪಂಚಾಯಿತಿ ಅಧ್ಯಕ್ಷರು/PDO ರವರು ಸೂಚಿಸಲು ಕೋರಲಾಗಿದೆ.

ಮೇಲಿನ ಎಲ್ಲ ಅಂಶಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡಲು ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ಆದೇಶಿಸಲು ಕೋರಲಾಗಿದೆ.

ಇಂತಿ ತಮ್ಮ ವಿಶ್ವಾಸಿ,

(ಪ್ರಸನ್ನ ಕುಮಾರ್ ಕೆ. ಪಿ)
ಜಿಲ್ಲಾ ಸಂಯೋಜಕರು,ಚಿಕ್ಕಬಳ್ಳಾಪುರ
ಅಕ್ಷರ ಫೌಂಡೇಶನ್, ಮೋ.9886522230,
G-mail : prasannakp21@gmail.com

ಲಗತ್ತು:

- ✓ 1-3-6-9 ಗೋಡೆ ಬರಹದ ಮಾಹಿತಿ ಪ್ರತಿ.
- ✓ ಶೈಕ್ಷಣಿಕ ಸ್ವಯಂಸೇವಕರ ನಮೂನೆ.

# 1–3–6–9

## “ಮಕ್ಕಳ ಗುಣಾತ್ಮಕ ಕಲಿಕೆಗೆ ಸಮುದಾಯದ ಭಾಗವಹಿಸುವಿಕೆ”

1. ಪ್ರತಿ ತಿಂಗಳು ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ (ಎಸ್.ಡಿ.ಎಮ್.ಸಿ.) ಮಾಸಿಕ ಸಭೆಯನ್ನು ತಪ್ಪದೇ ನಡೆಸುವುದು.
3. ಪ್ರತಿ ಮೂರು ತಿಂಗಳಿಗೊಮ್ಮೆ ಎಲ್ಲಾ ಪೋಷಕರು ತಪ್ಪದೇ ಪೋಷಕರ ಸಭೆಯಲ್ಲಿ ಭಾಗವಹಿಸುವುದು.
6. ಪ್ರತಿ ಆರು ತಿಂಗಳಿಗೊಮ್ಮೆ ಎಲ್ಲಾ ಪೋಷಕರು ಸಮುದಾಯದತ್ತ ಶಾಲಾ ಕಾರ್ಯಕ್ರಮದಲ್ಲಿ ತಮ್ಮ ಮಕ್ಕಳ ಕಲಿಕಾ ಪ್ರಗತಿ ಪರಿಶೀಲನೆ ಮಾಡುವುದು.
9. ಶೈಕ್ಷಣಿಕ ವರ್ಷದಲ್ಲಿ ಮಗು ಒಂಭತ್ತು ತಿಂಗಳು ಅಥವಾ 241 ದಿನಗಳು ಕಡ್ಡಾಯವಾಗಿ ಶಾಲೆಗೆ ಹಾಜರಾಗಬೇಕು.


## “ಎಲ್ಲಾ ಭಾಗೀದಾರರು ಸಮಪಾಲುದಾರರು”

| ಪರಿಕಲ್ಪನೆ | ಪ್ರಕಟಣೆ | ದಾನಿಗಳು |
|---|---|---|
| ಅಕ್ಷರ ಫೌಂಡೇಶನ್, ಬೆಂಗಳೂರು. | | |

## ಗೋಡೆ ಬರಹ ಬರೆಯಿಸುವಾಗ ಗಮನಿಸದಬೇಕಾದ ಅಂಶಗಳು

- ಗೋಡೆ ಬರಹವು ಸ್ಲೇಟ್ ಆಕೃತಿಯಲ್ಲಿರಬೇಕು.
- ಗೋಡೆ ಬರಹದ ಅಳತೆ 6 by 4 ಅಡಿ ಇರಬೇಕು.
- ಗೋಡೆ ಬರಹದ ಹಿಂಬದಿ ಬಣ್ಣ ಹಳದಿ ಇರಬೇಕು.
- ಗೋಡೆಯ ಬಾರ್ಡರ್‌ಲೈನ್ ಕಡು ನೀಲಿ ಬಣ್ಣದ್ದಾಗಿರಬೇಕು.
- 1–3–6–9 ಅಂಕಿಗಳು ಕೆಂಪು/ಕೇಸರಿ ಬಣ್ಣದಲ್ಲಿರಬೇಕು.

### ಗೋಡೆ ಬರಹದ ಮಹತ್ವ



# ಬುನಾದಿ ಅಕ್ಷರ ಜ್ಞಾನ ಮತ್ತು ಸಂಖ್ಯಾ ಜ್ಞಾನ (FLN) ಹಾಗು ಗಣಿತ ಕಲಿಕಾ ಆಂದೋಲನ

## ಗ್ರಾಮ ಮಟ್ಟದ ಶೈಕ್ಷಣಿಕ ಸ್ವಯಂ ಸೇವಕರು ಮತ್ತು ಗ್ರಾಮ ಪಂಚಾಯತ ಮಟ್ಟದ ಶೈಕ್ಷಣಿಕ ತಂಡದ ನಾಯಕರ ಆಯ್ಕೆಯ ಪಟ್ಟಿ 2022–23

ಗ್ರಾಮ ಪಂಚಾಯಿತಿಯ ಹೆಸರು: ಜಿಲ್ಲೆ: ತಾಲೂಕ:

ಗ್ರಾಮ ಪಂಚಾಯತ ಮಟ್ಟದ ತಂಡದ ನಾಯಕರ ಇಬ್ಬರ ಹೆಸರುಗಳು:

1) ಹೆಸರು: ವಿದ್ಯಾರ್ಹತೆ: ಫೋನ್ ನಂಬರ್: **Whats App** ಫೋನ್ ನಂ:

2) ಹೆಸರು: ವಿದ್ಯಾರ್ಹತೆ: ಫೋನ್ ನಂಬರ್: **Whats App** ಫೋನ್ ನಂ:

| ಕ್ರಮ ಸಂಖ್ಯೆ | ಶೈಕ್ಷಣಿಕ ಸ್ವಯಂ ಸೇವಕರ ಹೆಸರು | ತಂದೆಯ ಹೆಸರು | ಗ್ರಾಮದ ಹೆಸರು | ವಿದ್ಯಾರ್ಹತೆ | ಫೋನ್ ನಂಬರ್ | WhatsApp ಫೋನ್ ನಂಬರ್ | ಸಹಿ |
|---|---|---|---|---|---|---|---|
| | | | | | | | |
| | | | | | | | |
| | | | | | | | |
| | | | | | | | |
| | | | | | | | |
| | | | | | | | |
| | | | | | | | |
| | | | | | | | |
| | | | | | | | |
| | | | | | | | |
| | | | | | | | |
| | | | | | | | |
| | | | | | | | |
| | | | | | | | |
| | | | | | | | |

ಗ್ರಾಮ ಪಂಚಾಯಿತಿ ಅಧ್ಯಕ್ಷರ ಸಹಿ

ಪಂಚಾಯತ ಅಭಿವೃದ್ಧಿ ಅಧಿಕಾರಿಗಳ ಸಹಿ